ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಅಧ್ಯಕ್ಷಿಣಿಯವರೆ, ಮಾನ್ಯ ಸಂಸದೀಯ ಸಚಿವರು ಹೇಳುತ್ತಿದ್ದಾರೆ, ಇದನ್ನು ಪರಿಶೀಲನೆ ಮಾಡಿ ಇವತ್ತೇ ಭರವಸೆ ಕೊಡಬೇಕು. ಏಕೆಂದರೆ ಇದು ಬಹಳ ಗಂಭೀರವಾದ ಪ್ರಶ್ನೆ. ಅವರು ಒಬ್ಬ ಚುನಾಯಿತ ಮೇಯರ್ ಆಗಿ ಒಂದು ವಾರವಾಗಿದೆ. ಇವರನ್ನು ಬಂಧನದಲ್ಲಿ ಇಟ್ಟಿರತಕ್ಕಂಥಾದ್ದು ಎಂದರೆ ಯಾವ ನ್ಯಾಯ? ಯಾವ ಉದ್ದೇಶ. ಇದರಲ್ಲಿ ಇರತಕ್ಕಂಥಾದ್ದು ಯಾವ ರಾಜಕೀಯ ? ಕೇಂದ್ರದ ಗೃಹಸಚಿವರು ಎಸ್.ಬಿ. ಚೌಹಾಣರವರು ಇದರಲ್ಲಿ ಸೇರಿದ್ದಾರೆ ಎನ್ನತಕ್ಕಂಥ ಮಾತನ್ನು ನಾನು ಆರೋಪಣೆ ಮಾಡುತ್ತಿದ್ದೇನೆ. ಇದು ಸರಿಯಾದ ರೀತಿ ಅಲ್ಲ.

ಶ್ರೀ ವಾಟಾಳ್ ನಾಗರಾಜ್:– ನನಗೆ ಭರವಸೆ ಸಿಕ್ಕಿಲ್ಲ....

ಉಪಾಧ್ಯಕ್ಷಿಣಿಯವರು:– ಈಗ ಮಾನ್ಯ ಮುಖ್ಯ ಮಂತ್ರಿಯವರು ಬರುತ್ತಾ ಇದ್ದಾರೆ. ಅವರು ಈ ವಿಷಯದ ಬಗ್ಗೆ ಹೇಳುತ್ತಾರೆ.

(2) ದವಳ ಗ್ರಾಮದಲ್ಲಿ ಐದು ಜನರ ಸಜೀವ ದಹನ

ಶ್ರೀ ಆರ್. ಬಿ. ಚೌಧುರಿ:– ಮಾನ್ಯ ಉಪಾಧ್ಯಕ್ಷಿಣಿಯವರೇ, ಸಿಂಧಗಿ ತಾಲ್ಲೂಕಿನ ದವಳ ಗ್ರಾಮದಲ್ಲಿ 28–12–1992 ರಂದು ರಾತ್ರಿ ಕ್ಷುಲ್ಲಕ ಕಳವಿನ ಪ್ರಕರಣದ ಹಿನ್ನಲೆಯಲ್ಲಿ ಒಂದೇ ಕುಟುಂಬದ ಐದು ಜನರ ಸಜೀವ ದಹನ ನಡೆದಿದೆ. ಇದರ ಬಗ್ಗೆ ಸರ್ಕಾರದವರು ಹೇಳಿಕೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಈ ಪ್ರಕರಣದ ಸುಳಿವನ್ನು ಮೊದಲೇ ಪೊಲೀಸ್ ಠಾಣೆಗೆ ನೀಡಲಾಗಿದ್ದರೂ ಅವರು ಏನೂ ಕ್ರಮವನ್ನು ತೆಗೆದುಕೊಂಡಿಲ್ಲ. ಇದು ನಿಜವೇ ?

(3) ಗುಲ್ಬರ್ಗ ಜಿಲ್ಲೆಯಲ್ಲಿ ಕಲಬೆರಕೆ ಔಷಧಿಗಳಿಂದ ತೊಗರಿ ಬೇಳೆ ನಾಶ

ಶ್ರೀ ಬಾಬುರಾವ್ ಚೌವ್ಹಾಣ್:– ಮಾನ್ಯ ಉಪಾಧ್ಯಕ್ಷಿಣಿಯವರೇ, ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೇಳೆ ಸಂಪೂರ್ಣವಾಗಿ ನಾಶವಾಗಿದೆ. ಅಲ್ಲಿನ ರೈತರೆಲ್ಲರೂ ತೊಂದರೆಯಲ್ಲಿದ್ದಾರೆ. ನಿನ್ನೆ ಈ ವಿಚಾರವಾಗಿ ಒಂದು ಗಮನಸೆಳೆಯುವ ಸೂಚನೆ ಬಂದಿತ್ತು. ಆದರೆ ನನಗೆ ಅವಕಾಶ ದೊರಕಲಿಲ್ಲ. ಆದ್ದರಿಂದ ಈಗ ಆ ಬಗ್ಗೆ ಪ್ರಸ್ತಾಪಿಸಲು ಅವಕಾಶ ಕೊಡಬೇಕು.

ಉಪಾಧ್ಯಕ್ಷಿಣಿಯವರು:– ಮಾನ್ಯ ಚೌಧರಿಯವರು ಒಂದು ವಿಷಯವನ್ನು ಎತ್ತಿದ್ದಾರೆ. ಇದರ ಬಗ್ಗೆ ಸರ್ಕಾರದವರು ಏನು ಎಂದು ಹೇಳಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವಿಚಾರವು ಪತ್ರಿಕೆಗಳಲ್ಲಿಯೂ ಬಂದಿದೆ. ಈ ಬಗ್ಗೆ ವಿಷಯ ಸಂಗ್ರಹಣೆ ಮಾಡಿ ಸೂಕ್ತ ಉತ್ತರವನ್ನು ಕೊಡುತ್ತೇವೆ.

ಉಪಾಧ್ಯಕ್ಷಿಣಿಯವರು:– ಬಾಬುರಾವ್ ಚೌವ್ಹಾಣ್‌ರವರು ಮಾತನಾಡಿ.

ಶ್ರೀ ಬಾಬುರಾವ್ ಚೌವ್ಹಾಣ್:– ಗುಲ್ಬರ್ಗ ಜಿಲ್ಲೆಯಲ್ಲಿ ತೊಗರಿ ಬೇಳೆ ಬೆಳೆಯು ಸಂಪೂರ್ಣವಾಗಿ ನಾಶವಾಗಿದೆ. ಕಳಪೆ ದರ್ಜೆ ಹಾಗೂ ಕಲಬೆರಕೆಯ ಔಷಧಿಗಳಿಂದ ಈ ದುಷ್ಪರಿಣಾಮವಾಗಿದೆ. ಎಷ್ಟು ಔಷಧಿಯನ್ನು ಹೊಡೆದರೂ ಕೂಡ ಒಂದು ಹುಳುವೂ ಸಾಯಲಿಲ್ಲ. ಹುಳುಗಳು ತೊಗರಿ ತಿಂದು ಹೊರಟು ಹೋದುವು. ಮಾನ್ಯ ಕೃಷಿಸಚಿವರು ಅಲ್ಲಿಗೆ ಬಂದು ಎಲ್ಲಾ ಬೆಳೆಗಳನ್ನು ನೋಡಿ ಪರೀಕ್ಷಿಸಿ ಹೋಗಿದ್ದಾರೆ. ನಾನು ಸಚಿವರಲ್ಲಿ ಕೇಳಿಕೊಳ್ಳುವುದೇನೆಂದರೆ, ಗುಲ್ಬರ್ಗ ಜಿಲ್ಲೆಯ ರೈತರುಗಳಿಗೆ ಏನಾದರೂ ಪರಿಹಾರವನ್ನು ಮಂಜೂರು ಮಾಡಿಕೊಡುತ್ತೀರಾ ? ಏಕೆಂದರೆ ಅವರು ಸಾಲ ಮಾಡಿ ಔಷಧಿಗಳನ್ನು ತಂದು ಹಾಕಿದ್ದಾರೆ, ನಷ್ಟ ಅನುಭವಿಸಿದ್ದಾರೆ. ಸಾಲದಲ್ಲಿ ಮುಳುಗಿದ್ದಾರೆ. ಅವರಿಗೆ ಸಾಲ ಉಳಿಯಿತು. ತೊಗರಿ ಬೆಳೆ ಹೋಯಿತು. ಅದಕ್ಕೆ ಮಾನ್ಯ ಸಚಿವರು ಸರ್ಕಾರದ ವತಿಯಿಂದ ಒಂದು

ನಿಲುವನ್ನು ಪ್ರಕಟಿಸಬೇಕು. ರೈತರಿಗೆ ಈ ಬಗ್ಗೆ ಪರಿಹಾರ ಧನವನ್ನು ಕೊಡುತ್ತೀರಾ ? ಕೊಡುವುದಾದಲ್ಲಿ ಅದು ಎಷ್ಟು ಎಂದು ಹೇಳಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಮಾನ್ಯ ಉಪಾಧ್ಯಕ್ಷಿಣಿಯವರೇ, ಈ ವಿಷಯದಲ್ಲಿ ಈಗಾಗಲೇ ಒಂದು ಗಮನಸೆಳೆಯುವ ಸೂಚನೆಯು ಬಂದಿತ್ತು ಎಂದು ಕಾಣುತ್ತದೆ. ಈ ಬಗ್ಗೆ ಮಾನ್ಯ ಕೃಷಿ ಸಚಿವರು ಸ್ಥಳಕ್ಕೆ ಹೋಗಿ ಭೇಟಿ ನೀಡಿ ಪರೀಕ್ಷಿಸಿ ಬಂದಿದ್ದಾರೆ. ನಿನ್ನೆ ಅವರು ಆ ಕುರಿತು ಉತ್ತರವನ್ನು ಕೊಟ್ಟಿದ್ದಾರೆ. ಸಚಿವರೆ ಸ್ಥಳಕ್ಕೆ ಹೋಗಿ ನೋಡಿಕೊಂಡು ಬಂದಿದ್ದಾರೆ.

4) <u>ಕೊಳ್ಳೇಗಾಲದಲ್ಲಿ ಲಂಬಾಣಿ ಜನರ ಮೇಲೆ ಅತ್ಯಾಚಾರ</u>

ಶ್ರೀ ಮನೋಹರ ಐನಾಪುರ:– ಮಾನ್ಯ ಉಪಾಧ್ಯಕ್ಷಿಣಿಯವರೇ At Kollegal in Mysore District, Lambani members are being subjected to attracities continuously. Quite regularly, some cases of rape are being reported. The people had taken out protest march and dharanas have been conducted against the local police officers who have been doing this act. I request the Hon. Chief Minister Kindly to take a serious note of this since for the last 6–7 months specially the lambani women are subjected to attrocities quite regularly. The Government has turned its deaf ears so far towards this problem.

ಶ್ರೀ ಬಾಬುರಾವ್ ಚೌವ್ಹಾಣ್:– ಕೊಳ್ಳೇಗಾಲದಲ್ಲಿ ಆದಂಥ ಲಂಬಾಣಿ ಜನರ ಮೇಲಿನ ಅತ್ಯಾಚಾರದ ಕುರಿತು ಹೇಳುತ್ತಾ ಇದ್ದೇನೆ. ಅವರು ಪ್ರತಿಭಟನೆಯಾಗಿ ಪ್ರೊಸೆಷನ್ ಮಾಡಿದ್ದಾರೆ. ಮೆಮೋರಾಂಡಂ ಕೊಟ್ಟಿದ್ದಾರೆ. ಆದರೆ ಸಂಬಂಧಪಟ್ಟವರು ಏನೂ ಆಕ್ಷನ್ ತೆಗೆದುಕೊಂಡಿಲ್ಲ. ಎಸ್‌ಐ ಯವರು ಪೊಲೀಸ್‌ಸ್ಟೇಷನ್‌ನಲ್ಲಿ ಜನರು ತಮ್ಮ ಕಷ್ಟವನ್ನು ತೋಡಿಕೊಂಡಿದ್ದರೂ ಕೂಡ ಅವರ ಮೇಲೆಯೇ ಕೇಸ್ ಹಾಕಿದ್ದಾರೆ. ಈ ಬಗ್ಗೆ ಸರ್ಕಾರದ ಸ್ಪಷ್ಟವಾದ ಒಂದು ನಿಲುವು ಏನೆಂಬುದನ್ನು ದಯಮಾಡಿ ಹೇಳಬೇಕು.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:– ಈ ಸೂಚನೆಗಳನ್ನೆಲ್ಲಾ ಮುಂಚಿತವಾಗಿ ನಮಗೆ ತಿಳಿಸಿದರೆ ವಿಷಯ ಸಂಗ್ರಹಣೆ ಮಾಡಬಹುದು.

5. <u>ಕಾರ್ಗಿಲ್ ಸೀಡ್ಸ್ ಇಂಡಿಯಾ ಕಚೇರಿಯ ಧ್ವಂಸ.</u>

ಶ್ರೀ ಬಸವರಾಜ ರಾಯರೆಡ್ಡಿ (ಶ್ರೀ ಪಿಜಿಆರ್ ಸಿಂಧ್ಯಾ ಪರವಾಗಿ):– ಅಧ್ಯಕ್ಷಿಣಿಯವರೇ ರೈತಸಂಘದವರು ಹೇಳಿಕೊಂಡಿದ್ದಾರೆ, ಈ ಪತ್ರಿಕೆಯಲ್ಲಿ ವರದಿಯಾಗಿದೆ. ಕಾರ್ಗಿಲ್ ಸೀಡ್ಸ್ ಇಂಡಿಯಾ ಕಚೇರಿಗೆ ನುಗ್ಗಿ ಕಾಗದಪತ್ರಗಳನ್ನು ಕೆಳಕ್ಕೆ ಸುರಿದು ಬೆಂಕಿ ಹಾಕಿದ್ದಾರೆ, ಸುಟ್ಟು ಹಾಕಿದ್ದಾರೆ ಮತ್ತು ಮಲ್ಟಿ ನ್ಯಾಷನಲ್ ಸಂಸ್ಥೆ ಏನಿದೆ ಅದನ್ನು ಧ್ವಂಸಗೊಳಿಸಿ ಅದಕ್ಕೆ ಹಾನಿ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ. ಪೊಲೀಸರು ಏಕೆ ನಿಷ್ಕ್ರಿಯರಾಗಿದ್ದಾರೆ ? ಏಕೆ ಈ ಮಾತು ಆಡುತ್ತಿದ್ದೇನೆಂದರೆ ಮಲ್ಟಿ ನ್ಯಾಷನಲ್ ಕಂಪೆನಿಯನ್ನು ಬೆಂಬಲಿಸಿ ಮಾತಾಡುತ್ತಿಲ್ಲ ಆದರೆ ಆ ಕಂಪೆನಿಯಿಂದ ನಮ್ಮ ರೈತರಿಗೆ ವೈಜ್ಞಾನಿಕವಾಗಿ ಇನ್ನೂ ಹೆಚ್ಚಿನ ಅನುಕೂಲ ಆಗಲಿಕ್ಕೆ ಸಾಧ್ಯತೆ ಇದೆ. ಅದರ ಲಾಭ ಪಡೆದುಕೊಳ್ಳುವುದು ಬಿಟ್ಟು, ನನಗೆ ಅನಿಸುತ್ತದೆ ಇದರ ಹಿಂದೆ ಯಾವುದೋ ಕೈವಾಡ ಇದೆ, ಆದ್ದರಿಂದ ಈ ಬಗ್ಗೆ ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ, ಹಾಗೆ ಮಾಡಿದವರ ಬಂಧನ ಆಗಿದೆಯೇ ಎಂದು ತಿಳಿಸಬೇಕು. ನಿಜವಾದ ರೈತರು ಹೀಗೆ ಮಾಡುವುದಿಲ್ಲ, ಎಲ್ಲಾ ಪತ್ರಿಕೆಯಲ್ಲಿ ಇದು ಫ್ರಂಟ್ ಪೇಜ್‌ನಲ್ಲಿದೆ.